ಇಬ್ಬರು ಮಹಿಳೆಯರಿಗೆ ಅದರಲ್ಲಿ ಯಾವುದೇ ತಪ್ಪು ಕಂಡು ಬರಲಿಲ್ಲ. ಇರುವನೊಬ್ಬ ಮಗನ ಬಗ್ಗೆ... ಅದೂ ಇಂತಹ ಯೋಗ್ಯ ಮಗನ ಬಗ್ಗೆ ಹೆಮ್ಮೆ ಪಡದ ತಾಯಿಯಾದರೂ ಯಾರು? ಅದೂ ಮಗನನ್ನು ಕಾಣದ ತಾಯಿ ಮಗನನ್ನು ನೆನೆಸಿಕೊಂಡಾಗ ಕಣ್ಣುಬ್ಬಿ ಬರುವಂತಹುದು ಸಹಜ ತಾನೇ.

ಅವರಿಬ್ಬರೂ ನಿರೀಕ್ಷಿಸಿದಂತೆಯೇ ಆಯಿತು. ಅವರು ಮೈಸೂರಿನಿಂದ ಮರಳಿದ ಒಂದು ವಾರದ ನಂತರ, ಸಾದಿಕಾಗೆ ಫೋನ್ ಮಾಡಿ ತಾವು ಹಾಸನಕ್ಕೆ ಬರುತ್ತಿರುವುದಾಗಿಯೂ ಸಕಲೇಶಪುರದಲ್ಲಿರುವ ತಮ್ಮ ಸ್ನೇಹಿತರ ಮನೆಗೆ ಹೋಗುತ್ತಿರುವುದಾಗಿಯೂ ಆಕೆಗೆ ಬಿಡುವಿದ್ದಲ್ಲಿ ಮಾರ್ಗ ಮಧ್ಯದಲ್ಲಿ ಆಕೆಯನ್ನು ಭೇಟಿ ಮಾಡುವುದಾಗಿಯೂ ಆಸಿಫಾ ತಿಳಿಸಿದಳು.

'ಹಾಗೆಂದರೆ ಹೇಗೆ... ನಾನಂತೂ ಬಿಡುವಾಗಿಯೇ ಇದ್ದೇನೆ. ಇಲ್ಲದಿದ್ದರೂ ನಿಮ್ಮಂತಹವರು ಬರುವುದಾಗಿ ಹೇಳಿದ ಮೇಲೆ ಬಿಡುವು ಮಾಡಿಕೊಳ್ಳುತ್ತಿದ್ದೆ. ನೀವಂತೂ ಖಂಡಿತಾ ಬರಲೇ ಬೇಕು. ನಾನು ಕಾಯುತ್ತಿರುತ್ತೇನೆ' ಎಂದು ಆಗ್ರಹಪೂರ್ವಕವಾಗಿ ಅವರ ಭೇಟಿಯನ್ನು ನಿಗದಿಗೊಳಿಸಿದಳು.

ಈ ಬಗ್ಗೆ ಕೂಡಲೇ ರೆಹಮತ್‌ಗೆ ತಿಳಿಸಿದಳೂ ಕೂಡಾ. ನಂತರ ಉಭಯತ್ರರೂ ಕೂಡಾ ಪ್ಲಾನ್ ಮಾಡಿ, ಸಾದಿಕಾ ತಮ್ಮ ಮನೆಯಲ್ಲಿ ಚಾಯೆ ಪಾನಿಯ ವ್ಯವಸ್ಥೆ ಮಾಡಿದ್ದು, ನಂತರ ಉಪಾಯವಾಗಿ ತಮ್ಮ ಮನೆಗೆ ಕರೆತರಬೇಕೆಂತಲೂ ತಮ್ಮ ಮಗಳು ಒಮ್ಮೆ ಅವರ ಕಣ್ಣಿಗೆ ಬಿದ್ದ ನಂತರ ಮುಂದಿನ ಹಂತದ ಕಾರ್ಯಾಚರಣೆ. ಅಂದರೆ, ಒಳ್ಳೆ ಗಡದ್ದಾದ ಬಿರಿಯಾನಿ ಊಟ... ಆ ಸಂದರ್ಭದಲ್ಲಿ ಅಜ್ರಾ ಹೇಗೂ ಬಂದವರ ಕಣ್ಣಿಗೆ ಬಿದ್ದೇ ಬೀಳುತ್ತಾಳೆ ಎಂತಲೂ ಉಭಯತ್ರರ ನಿರೀಕ್ಷೆಯಾಗಿತ್ತು. ಅದೆಷ್ಟೇ ಗಟ್ಟಿ ನಿರ್ಧಾರವನ್ನು ಮಾಡಿದರೂ ತಮ್ಮ ಮನೆಯೆಂಬ ಮನೆಯ ಬಗ್ಗೆ ಆಕೆಗೆ ಅತೀವ ಕೀಳರಿಮೆ ಉಂಟಾಗಿತ್ತು.

ಆದರೂ ಮಾಡುವ ವ್ಯವಸ್ಥೆಯೆಲ್ಲಾ ಮಾಡಲೇ ಬೇಕಲ್ಲಾ. ಸಿಕ್ಕ ಒಂದೆರಡು ದಿನಗಳ ಅವಕಾಶದಲ್ಲಿಯೇ ಅವಳು ಮನೆಯನ್ನು ಸಿದ್ಧಗೊಳಿಸುತ್ತಿದ್ದ ಕ್ರಮವನ್ನು ನೋಡಿಯೇ ಉಳಿದವರಿಗೆಲ್ಲಾ ಏನೋ 'ದಾಲ್ಮೇ ಕಾಲಾ ಹೈ' ಎಂಬ ಗುಮಾನಿ ಬಂದು ಬಿಟ್ಟಿತ್ತು. ಕೊನೆಗೂ ಅವಳು ತನ್ನ ಅತ್ಯುತ್ಸಾಹವನ್ನು ಅದುಮಿಡಲು ಸಾಧ್ಯವಾಗಲೇ ಇಲ್ಲ . ಅವಳಿಂದ ಮೂಡಿದ ಈ ಉತ್ಸಾಹದ ಪ್ರಭಾವಳಿ ಸಾಂಕ್ರಾಮಿಕವಾಗಿ ಇಡೀ ಮನೆಗೆ ವ್ಯಾಪಿಸುವಂತಾದಾಗ, ಅವಳು ತನ್ನ ಗುಟ್ಟನ್ನು ಬಯಲುಮಾಡಿದಳು. ಆದರೆ, ಅವಳ ಉತ್ಪ್ರೇಕ್ಷಿತ ವರದಿಗಳ ಬಗ್ಗೆ ಅವಳ ಗಂಡ ಮತ್ತು ಮಗ ನಿರ್ಲಿಪ್ತರಾದರು. ಮತ್ತು ನಯಾಜ್ ತನ್ನ ಇಂಟರ್‌ನೆಟ್ ಮ್ಯಾಚ್‌ಮೇಕಿಂಗ್‌ನ ಬೇಟೆಯನ್ನು ಇನ್ನಷ್ಟು ತೀವ್ರಗೊಳಿಸಿದ. ಅಜ್ರಾ ಮಾತ್ರ ತಾಯಿಯ ಮಾತುಗಳನ್ನು ನೆಚ್ಚಿಕೊಂಡಳು. ಇಷ್ಟೆಲ್ಲಾ ಪ್ರಯತ್ನ ಪಟ್ಟಿರುವ ತಾಯಿ ಅವನ ಒಂದು ಫೋಟೊವನ್ನಾದರೂ ತಂದಿದ್ದರೆ ಒಳ್ಳೆಯದಿತ್ತು ಎಂದು ಕೂಡ ಅವಳಿಗೆ ಅನಿಸಿತ್ತು.

ರೆಹಮತ್ ಹರಕೆ ಕಟ್ಟಿದಳು. ನಮಾಜ್‌ನಲ್ಲಿ ವಿಶೇಷವಾಗಿ ಪ್ರಾರ್ಥಿಸಿದಳು, 'ಈ ಸಂಬಂಧ ಕೂಡಿ ಬಂದರೆ ಸಾಕು' ಹಾಗೆಯೇ ಮದುವೆಯಲ್ಲಿ ಸಾದಿಕಾಗೆ ಒಂದು ಒಳ್ಳೆ ಸೀರೆಯನ್ನು ಉಡುಗೊರೆಯಾಗಿ ಕೊಡಬೇಕೆಂದು ಅವಳು ಮನದಲ್ಲಿಯೇ ಗುರುತುಹಾಕಿಕೊಂಡಳು. ಅಥವಾ ಒಂದು ಉಂಗುರವೂ ಆದೀತು. ಆದರೆ, ಅಬ್ಬಾ... ಈ ಚಿನ್ನದ ಬೆಲೆಯೋ... ಆಕಾಶಕ್ಕೇರಿದೆಯಲ್ಲಾ! ಅಂತೂ ಆದಿನ ಬಂದೇ ಬಂದಿತು. ತಮ್ಮ ಸ್ವಂತ ಕಾರಿನಲ್ಲಿ ಬಂದಿಳಿದ ಆ